ಶ್ರೀ ಬಿ. ಲಕ್ಕಪ್ಪ.—ಇಂಡಿಯನ್ ಎಕ್ಸ್‌ಪ್ರೆಸ್

ಶ್ರೀ ಎಂ. ಪಿ. ಪ್ರಕಾಶ್.—ವಿವರಗಳನ್ನು ಕಳಿಸಿ ಕೊಟ್ಟಿಗೆ ಅಂಕಿನ ಸಂಪ್ಯೆಗಳ ವ್ಯತ್ಯಾಸ ಇದ್ದರೆ ಸಂಪೂರ್ಣವಾದ ಉತ್ತರವನ್ನು ನಾನು ಕಳಿಸಿಕೊಡಬಹುದು. ಅಧ್ಯಕ್ಷರೇ, ಸುಮಾರು ಹತ್ತು ಸಾವಿರ ನಿವೇಶನಗಳನ್ನು ಡಾ: ಅಂಬೇಡ್ಕರ್ ಜನ್ಮಶತಾಬ್ದಿ ಸಂದರ್ಭದಲ್ಲಿ ಪ್ರತಿ ವರ್ಷ ೨ ಸಾವಿರದಂತೆ ಕೊಡಬೇಕೆಂದು ನಿರ್ಣಯ ಮಾಡಿದ್ದೇವೆ. ಇದರ ಪ್ರಕಾರ ಇನ್ನು ಐದು ವರ್ಷಗಳ ಕಾಲದಲ್ಲಿ ಸುಮಾರು ಹತ್ತು ಸಾವಿರ ನಿವೇಶನಗಳನ್ನು ಕೊಡತಕ್ಕಂಥ ವ್ಯವಸ್ಥೆ ಇದೆ. ಇದರಲ್ಲಿ ಈಗಾಗಲೇ ೨ ಸಾವಿರ ನಿವೇಶನಗಳನ್ನು ಕೊಟ್ಟಿದ್ದೇವೆ. ೩೦×೪೦ ಅಡಿ ನಿವೇಶನಗಳಿಗೆ ಹೆಚ್ಚಿಗೆ ಇರತಕ್ಕಂದ್ದರಲ್ಲಿ ಮಾಮೂಲಾಗಿ ನಿರ್ಧಾರ ಮಾಡಿರತಕ್ಕ ದರಗಳು ಏನಿವೆ, ಇದರಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದವರಿಗೆ ೨೦×೩೦ ಅಡಿ ಅಳತೆಯ ನಿವೇಶನಗಳಿಗೆ ಶೇಕಡ ೨೫ ರಲ್ಲಿ ಕೊಡುತ್ತಿದ್ದೇವೆ. ಮತ್ತೆ ಆರ್ಥಿಕವಾಗಿ ಹಿಂದುಳಿದಿರತಕ್ಕಂಥವರಿಗೆ ೨×೩೦ ಅಡಿ ಅಳತೆಯ ನಿವೇಶನಗಳನ್ನು ಕೊಟ್ಟಾಗ ಶೇಕಡ ೫೦ ಪರ್ಸೆಂಟ್ ಕೂಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ.

ಶ್ರೀ ಬಿ. ಲಕ್ಕಪ್ಪ.—ಈಗ ಒಬ್ಬರು ಹರಿಜನರಿಗೆ ಕೊಟ್ಟಿದ್ದಾರೆ. ಅವರ ಹೆಸರು ದೇವಿ ಪುಷ್ಪ ರಾಜ್ ಎಂದು ಇವರಿಗೆ ಬಿ. ಡಿ. ಎ. ನವರು ನೋಟೀಸ್ ಕೊಟ್ಟಿದ್ದಾರೆ. ೩೦-೪೦ರ ಸೈಟಿಗೆ ೨೮ ಸಾವಿರ ರೂಪಾಯಿಗಳ ಚಾರ್ಜ್ ಮಾಡಿದ್ದಾರೆ. ಇದೇನು ಸಬ್ಸಿಡಿ ರೇಟೆ ಅಥವಾ ಲಕ್ಚುಯಲ್ ರೇಟೆ. ಹರಿಜನರಿಗೆ ಸೈಟು ವಿಂಗಡಣೆ ಮಾಡುವಾಗ, ಒಂದು ಏರಿಯಾ ನಿಗದಿ ಮಾಡಿ. ೧೮ ಪರ್ಸೆಂಟ್‌ನಂತೆ ಕೊಡಬೇಕೆಂಬ ವಿಚಾರ ಸರ್ಕಾರದ ಯೋಜನೆಯಲ್ಲಿದೆಯೇ ?

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ, ಈ ರೀತಿ ೧೮ ಪರ್ಸೆಂಟ್‌ನಂತೆ ಮೀಸಲಾತಿ ಮನೆಗಳನ್ನು ಒಂದೇ ಕಡೆ ಕೊಡುವಂಥ ವ್ಯವಸ್ಥೆ ಮಾಡಿಲ್ಲ. ಡಾ, ಅಂಬೇಡ್ಕರ್ ಜನ್ಮ ಶತಾಬ್ದಿ ಸಂದರ್ಭದಲ್ಲಿ, ಲಿಂಗರಾಜಪುರದ ಹತ್ತಿರ ಕೆಲವು ನಿವೇಶನಗಳನ್ನು ಕೊಟ್ಟಿದ್ದೇವೆ. ಈ ದೇವಿ ಪುಷ್ಪ ರಾಜ್ ಎಂದು ಏನು ತಾವು ಹೇಳಿದ್ದೀರಿ, ಅವರಿಗೆ ಮಾಮೂಲಿ ದರದಲ್ಲೇ ಕೊಟ್ಟಿದ್ದೇವೆ ೩೦×೪೦ ರ ನಿವೇಶನಗಳನ್ನು ಮಾಮೂಲಿ ದರದಲ್ಲೇ ಕೊಟ್ಟಿದ್ದೇವೆ. ಯಾವುದೇ ತರವಾದಂಥ ರಿಯಾಯಿತಿ ದರ ಇಲ್ಲ.

ಅಧ್ಯಕ್ಷರು.—ಪ್ರಶ್ನೆ ೨೪೬ (೧೧೫೧) ಕಾಲಾವಕಾಶ ಕೇಳಿದ್ದಾರೆ. ಇದಕ್ಕೆ ಇನ್ನೂ ಉತ್ತರ ಬಂದಿಲ್ಲ. ಈಗ ಮುಂದಿನ ಪ್ರಶ್ನೆ, ಆರ್. ವೆಂಕಟರಾಮಯ್ಯನವರೇ ತಾವು ಕೇಳಬಹುದು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನಗಳ ವಿತರಣೆ.

೧೧೧೧. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು) ಮಾನ್ಯ ಬೆಂಗಳೂರು ಅಭಿವೃದ್ಧಿ ವಾರ್ತಾ ಮತ್ತು ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೦–೮೧ ರಿಂದ ತಹಲ್‌ವರೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಎಷ್ಟು ಜನರು ನಿವೇಶನಗಳನ್ನು ಬೇಕೆಂದು ಅರ್ಜಿ ಹಾಕಿದ್ದಾರೆ ?

ಆ) ಎಷ್ಟು ಅರ್ಜಿದಾರರಿಗೆ ತಹಲ್‌ವರೆಗೆ ನಿವೇಶನಗಳನ್ನು ಕೊಡಲಾಗಿದೆ, ಬಾಕಿ ಇರುವ ಅರ್ಜಿದಾರರೆಷ್ಟು ?

ಶ್ರೀ ಎಂ. ಪಿ. ಪ್ರಕಾಶ್ ಬೆಂಗಳೂರು ಅಭಿವೃದ್ಧಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು.

ಅ) ವಿವರಗಳು ಈ ಕೆಳಕಂಡಂತಿವೆ :

ಪ್ರಕಟಣೆ	ಆರ್ಜಿದಾರರ ಸಂಖ್ಯೆ
ನವೆಂಬರ್ ೧೯೮೧	೨೦,೭೫೫
ಡಿಸೆಂಬರ್ ೧೯೮೧	೧೩,೯೯೭
ಜುಲೈ ೧೯೮೨	೧೭,೯೦೭
ಆಕ್ಟೋಬರ್ ೧೯೮೨	೨೪,೩೫೫
ಮಾರ್ಚ್ ೧೯೮೪ (ಇಡಬ್ಲ್ಯೂಎಸ್)	೮,೪೨೫
ಸೆಪ್ಟೆಂಬರ್ ೧೯೮೪	೩೯,೬೯೭
ಮಾರ್ಚ್ ೧೯೮೬	೪೬,೯೨೨
ಡಿಸೆಂಬರ್ ೨೯೮೬	೭೭,೯೫೭
ಜನವರಿ ೧೯೮೭	೭೭,೩೪೬
ಏಪ್ರಿಲ್ ೧೯೮೭ (ಎಸ್.ಸಿ./ಎಸ್.ಟಿ.)	೩,೯೪೨
ಜುಲೈ ೨೯೮೭	೮೨,೧೨೨

ಆ) ಈ ಎಲ್ಲಾ ಪ್ರಕಟಣೆಗಳಿಗೆದುರಾಗಿ ಪುಟಿಕೆ ಮಾಡಲ್ಪಾದ ಒಟ್ಟು ನಿವೇಶನಗಳು ೨೪.೪೦೯ ಬಾಕಿ ಆರ್ಜಿದಾರರು ಇಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹಂಚಿಕೆ ಮಾಡಲಾದ ನಿವೇಶನಗಳು ೨೪,೪೦೯ ಎಂದು ಹೇಳಿದ್ದಾರೆ. ಇದರಲ್ಲಿ ಸರಾಸರಿ ಕೊನೆಯ ಪಕ್ಷ ೬೦ ಸಾವಿರ ಸೈಟ್‌ಗಳನ್ನಾದರೂ ಹಂಚಿಕೆ ಮಾಡಬೇಕಾಗಿದೆ. ಇದಕ್ಕೆ ಎಷ್ಟು ಕಾಲಾವಕಾಶ ತೆಗೆದುಕೊಂಡು ಹಂಚುತ್ತೀರಿ ಎಂಬುದು ಒಂದು ಪ್ರಶ್ನೆ, ೫,೭೦೦ ಎಕರೆ ಜಮೀನನ್ನು ಆಕ್ವೈರು ಮಾಡಬೇಕೆಂದು ತಿಳಿಸಿದ್ದೀರಿ, ಇದನ್ನು ಯಾವಾಗ, ಎಷ್ಟು ದಿವಸದಲ್ಲಿ ಆಕ್ವೈರು ಮಾಡಿಕೊಂಡು ಹಂಚುತ್ತೀರಿ, ಎಂಬುದನ್ನು ತಿಳಿಸಿ.

ಶ್ರೀ ಎಂ. ಪಿ ಪ್ರಕಾಶ್.—ಮಾನ್ಯ ಅಧ್ಯಕ್ಷರೇ, ೫,೭೦೦ ಎಕರೆ ಜಮೀನನ್ನು ಆಕ್ವೈರ್ ಮಾಡಿಕೊಂಡು, ಅಪರ ಲೆಕ್ಕಾಚಾರದಂತೆ ೬೦ ಸಾವಿರ ಆರ್ಜಿದಾರರಿಗೆ ನಿವೇಶನ ಕೊಡಬೇಕಾಗಿದೆ. ಇದಕ್ಕೆ ಬೇರೆ ಬೇರೆ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಹೊಸ ಸ್ಕೀಮ್ ತರಬೇಕೆಂದು ಯೋಚಿಸಿದ್ದು, ಇದನ್ನು ಸಚಿವ ಸಂಪುಟದ ಮುಂದೆ ಇಡಬೇಕೆಂದು ಪ್ರಯತ್ನ ಮಾಡಿದ್ದೇವೆ. ಆದಷ್ಟು ಜಾಗ್ರತೆ ನಿವೇಶನ ಹಂಚುವ ಕಾರ್ಯ ಮಾಡುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಬೆಂಗಳೂರು ನಗರದಲ್ಲಿ ಈಗ ೧೨೫ ಪ್ರೈವೇಟ್ ಸೊಸೈಟಿಗಳಿವೆ. ಈ ಸೊಸೈಟಿಗಳವರಿಗೆ ೧ ಲಕ್ಷ ೫೦ ಸಾವಿರ ಸೈಟುಗಳಂ ಬೇಕಾಗುತ್ತವೆ. ಇವರು ಈಗಾಗಲೇ ಇರ್ರಿವೋಕಬಲ್ ಪವರ್ ಆಫ್ ಅಟಾರ್ನಿ ಮೂಲಕ ಅಗ್ರಿಮೆಂಟ್ ಮಾಡಿಕೊಂಡು ಅವರೇ ಜಮೀನನ್ನು ತೆಗೆದುಕೊಂಡಿದ್ದಾರೆ. ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಂ. ಪಿ. ಪ್ರಕಾಶ್.—ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ ವಿಷಯಗಳು ಇದ್ದರೆ, ಇದಕ್ಕೆ ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ, ಅದಕ್ಕೆ ಸಮಂಜಸವಾದ ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ.

12–00 Noon

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ ಸ್ಪಷ್ಟವಾಗಿ ನೇರವಾಗಿ ಕೇಳುತ್ತೇನೆ. ಕೆಲವು ಸೊಸೈಟಿಗಳಂ ಇವೆ. ಉದಾಹರಣೆಗೆ ಗಿರಿನಗರ ಸೊಸೈಟಿಗೆ ನಾಲ್ಕು ಸಾವಿರ ಎಕರೆ ಆಕ್ವೈರ್ ಮಾಡಿಕೊಳ್ಳುವುದಕ್ಕೆ ಸರಕಾರ ಪರ್ಮಿಷನ್ ಕೊಟ್ಟಿದೆ ಎಂದು ಹೇಳಿದ್ದಾರೆ. ನಾಲ್ಕು ಸಾವಿರ ಎಕರೆಯನ್ನು ಗಿರಿನಗರ ಸೊಸೈಟಿಗೆ ಆಕ್ವೈರ್ ಮಾಡಿಕೊಳ್ಳುವುದಕ್ಕೆ ಪರ್ಮಿಷನ್ ಕೊಡುವ ಬದಲು ಅದನ್ನು ತಪ್ಪಿಸಿ, ತಾವೇ ಆಕ್ವಿಸಿಷನ್ ಮಾಡಿಕೊಳ್ಳುವುದಕ್ಕೆ ಏನು ತೊಂದರೆಗಳು ಇತ್ತು ? ತಾವೇ ಆಕ್ವಿಸಿಷನ್

ಮಾಡಿಕೊಂಡಿದ್ದರೆ ಇಲ್ಲಿ ಅಪ್ಲಿಕೇಷನ್ ಹಾಕಿರುವವರಿಗೆಲ್ಲಾ ಸೈಟ್‌ಗಳನ್ನು ಕೊಡಬಹುದಾಗಿತ್ತಲ್ಲ ? ಏತಕ್ಕೆ ನೀವು ಅವರ ಜೊತೆ ಶಾಮೀಲಾಗಿದ್ದೀರಿ ಎಂದು ಸ್ಪಷ್ಟವಾಗಿ ಕೇಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಇವರು ಪ್ರಾಯಶಃ ಯಾರ ಜೊತೆ ಶಾಮೀಲಾಗಿ ಮಾತನಾಡುತ್ತಿದ್ದಾರೋ ಗೊತ್ತಿಲ್ಲ. ಇಲ್ಲಿ ನಾವು ಶಾಮೀಲಾಗುವ ಪ್ರಶ್ನೆ ಉದ್ಭವವಾಗುವುದಿಲ್ಲ. ಪ್ರಮಾಣಿಕತೆ ಎಂಬುದು ಯಾರೊಬ್ಬರ ಗುತ್ತಿಗೆಯೂ ಅಲ್ಲ.

(ಗೊಂದಲ)

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ

ಶ್ರೀ ಆರ್. ವೆಂಕಟರಾಮಯ್ಯ—ಶಾಮೀಲಾಗಿದ್ದಾರೆ ಎಂದು ಪುನಃ ಹೇಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಪ್ರಾಮಾಣಿಕತೆ ಎಂಬುದು ಯಾರೊಬ್ಬರ ಗುತ್ತಿಗೆಯೂ ಅಲ್ಲ. ಯಾರೊಬ್ಬರು ಇದರಲ್ಲಿ ಶಾಮೀಲಾಗಿದ್ದಾರೆ ಎಂದು ಆಪಾದನೆ ಮಾಡುವುದಿದ್ದರೆ ನೇರವಾಗಿ ಅದರ ಬಗ್ಗೆಯೇ ಪ್ರಶ್ನೆ ಕೇಳಲಿ. ಅರ್ಧ ಘಂಟೆ ಚರ್ಚೆ ಮಾಡಲಿ, ಅದಕ್ಕೆ ಉತ್ತರ ಹೇಳುತ್ತೇವೆ. ಬೇರೆ ಯಾವುದೋ ವಿಚಾರ ಪ್ರಸ್ತಾಪ ಮಾಡಿ ಶಾಮೀಲಾಗಿದ್ದಾರೆ ಎಂದು ಹೇಳುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ ತಾವು ಆ ರೀತಿ ಮಾತನಾಡಬಾರದು.

ಶ್ರೀ ಎಂ.ಪಿ. ಪ್ರಕಾಶ್,—ಸಾರ್ವಜನಿಕ ವಿಷಯದಲ್ಲಿ ಇವರಿಗೆ ವಿವರಗಳು ಬೇಕಾಗಿದ್ದರೆ ನೇರವಾಗಿ ಆ ಗೃಹ ನಿರ್ಮಾಣ ಸಹಕಾರ ಸಂಘಗಳ ವಿಷಯದಲ್ಲಿ ಪ್ರಸ್ತಾವನೆಯನ್ನು ಕಳುಹಿಸಲಿ. ಪ್ರಶ್ನೆಯನ್ನು ಕಳುಹಿಸಿಕೊಡಲಿ, ಅರ್ಧ ಘಂಟೆ ಚರ್ಚೆ ಬೇಕಾದರೆ ಮಾಡಲಿ. ತಾವು ಅದಕ್ಕೆ ಪ್ರಾವಿಜನ್ ಮಾಡಿದರೆ ನಾವು ತಯಾರಾಗಿದ್ದೇವೆ. ಇಗಕ್ಕೆ ಪೂರಕವಾದ ಪ್ರಶ್ನೆ ಕೇಳಿದರೆ ಮಾತ್ರ ಉತ್ತರ ಕೊಡುವುದಕ್ಕೆ ಆಗುತ್ತದೆ. ಪೂರಕವಲ್ಲದ ಪ್ರಶ್ನೆಗಳನ್ನು ಕೇಳಿದರೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು.— ಮಾನ್ಯ ವೆಂಕಟರಾಮಯ್ಯನವರೇ, ಬೇಕಾದರೆ ಅರ್ಧ ಗಂಟೆ ಚರ್ಚೆ ಮಾಡಲಂ ಸೂಚನೆಯನ್ನು ಕಳುಹಿಸಿ.

ಶ್ರೀ ಆರ್. ವೆಂಕಟರಾಮಯ್ಯ.—ಅದು ಆಗುವುದು ಹೀಗ್ಗೆ ಹೋದ ಸೆಷನ್‌ನಲ್ಲಿ ಅರ್ಧ ಗಂಟೆ ಚರ್ಚೆಗೆ ಹಾಕಿದ್ದೆ, ಅದು ಬರಲೇ ಇಲ್ಲ. ಅರ್ಧ ಗಂಟೆ ಚರ್ಚೆಗೆ ಹಾಕಿದರೆ ಅದು ಬರುವುದಿಲ್ಲ.

ಅಧ್ಯಕ್ಷರು,—ಈಗ ಕೊಶ್ಚನ್ಸ್ ಹವರ್ ಮುಗಿಯಿತು. ಇನ್ನೂ ಎರಡು ಕೊಶ್ಚನ್ಸ್ ಇದೆ. ಜನತಾದವರದ್ದು ಒಂದು ಇದೆ, ಕ್ಯಾಂಗ್ರೆಸ್‌ನವರದ್ದು ಒಂದು ಇದೆ, ಎರಡನ್ನೂ ಲ್ಯಾಪ್ಸ್ ಮಾಡಬಹುದು. ಲ್ಯಾಪ್ಸ್ ಮಾಡಿದರೆ ನೀವು ಗಲಾಟೆ ಮಾಡುತ್ತೀರಿ. ಅವಕಾಶ ಕೊಡಲಿಲ್ಲ ಎಂದು ಗಲಾಟೆ ಮಾಡಂತ್ತೀರಿ ಇಷ್ಟು ಅವಕಾಶ ಕೊಟ್ಟರೂ ಅವಕಾಶ ಕೊಡಲಿಲ್ಲ ಎಂದು ಗಲಾಟೆ ಮಾಡುತ್ತೀರಿ. ಇನ್ನೂ ಎರಡು ಪ್ರಶ್ನೆ ಉಳಿದಿದೆ. ಅದುದರಿಂದ ದಯವಿಟ್ಟು ಯಾರು ಪ್ರಶ್ನೆ ಹಾಕಿರುತ್ತಾರೆ ಅವರು ಮಾತ್ರ ಸಪ್ಲಿಮೆಂಟರಿ ಕೇಳಬೇಕು. ಇನ್ನೂ ಎರಡು ಕೊಶ್ಚನ್ಸ್‌ಇದೆ, ಅದನ್ನು ಲ್ಯಾಪ್ಸ್ ಮಾಡುವುದಿಲ್ಲ, ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ರಾಷ್ಟ್ರೀಯ ಉದ್ಯೋಗ ಭರವಸೆ ಯೋಜನೆ ಎಂದು ತಪ್ಪಾಗಿದೆ. ಅದು ರಾಷ್ಟ್ರೀಯ ಉದ್ಯೋಗ ಭರವಸೆ ಯೋಜನೆ ಅಲ್ಲ. ಅದು ನಮ್ಮ ಯೋಜನೆ. ಅದು ಗ್ರಾಮೀಣ ಉದ್ಯೋಗ ಭರವಸೆ ಯೋಜನೆ, ಅದನ್ನು ಗ್ರಾಮೀಣ ಉದ್ಯೋಗ ಭರವಸೆ ಯೋಜನೆ ಎಂದು ತಿದ್ದಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ರಾಷ್ಟ್ರೀಯ ಉದ್ಯೋಗ ಭರವಸೆ ಯೋಜನೆ

೧೮೮೪. —ಶ್ರೀ ಜ್ಞಾನವೇವ ದೊಡ್ಡ ಮೇಟಿ (ರೋಣ).—ನಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಷ್ಟ್ರೀಯ ಉದ್ಯೋಗ ಭರವಸೆ ಯೋಜನೆಯ ಆಶಯದಲ್ಲಿ ರಾಜ್ಯದಲ್ಲಿ ಅಯ್ಕೆಮಾಡಿದ ತಾಲ್ಲೂಕುಗಳು ಎಷ್ಟು ? (ಜಿಲ್ಲಾವಾರು ಮಾಹಿತಿ ಒದಗಿಸುವುದು).